

- ಧೂಮಪಾನ, ಮದ್ಯಪಾನ, ಮಾದಕ ದ್ರವ್ಯ ಮುಂತಾದ ದುಶ್ಚಟ ಹೊಂದಿರುವವರು
- ವೃದ್ಧರು ಮತ್ತು ಮಕ್ಕಳು

## ಕ್ಷಯದ ಪರಿಣಾಮ

ಕ್ಷಯರೋಗದ ಲಕ್ಷಣಗಳು ಕಂಡುಬಂದಲ್ಲಿ ತಾತ್ಸಾರ ಮಾಡದೆ ಕೂಡಲೇ ಅರ್ಹ ವೈದ್ಯರಿಂದ ಚಿಕಿತ್ಸೆ ಪಡೆಯಬೇಕು. ಸೂಕ್ತ ಚಿಕಿತ್ಸೆ ಪಡೆಯದಿದ್ದಲ್ಲಿ ರೋಗ ಮತ್ತಷ್ಟು ಮಾರಕವಾಗುವ ಸಾಧ್ಯತೆ ಹೆಚ್ಚಿದೆ. ಸರಿಯಾದ ಚಿಕಿತ್ಸೆ ಪಡೆಯದಿದ್ದರೆ ಶ್ವಾಸಕೋಶ, ಮೆದುಳು, ಬೆನ್ನುಮೂಳೆ ಭಾಗಗಳಿಗೆ ಹಾನಿಕಾರಕವಾಗುತ್ತದೆ. ಹಾಗಾಗಿ ರೋಗವನ್ನು ಯಾವುದೇ ಹಂತದಲ್ಲಿಯೂ ಕಡೆಗಣಿಸಬಾರದು.

## ಟಿಬಿ ಹೇಗೆ ಹರಡುತ್ತದೆ?

ಇದೊಂದು ಸಾಂಕ್ರಾಮಿಕ ಕಾಯಿಲೆಯಾಗಿದ್ದು, ಕ್ಷಯ ಸೋಂಕು ಇದ್ದ ವ್ಯಕ್ತಿ ಕೆಮ್ಮಿದಾಗ, ಸೀನಿದಾಗ ಉತ್ಪತ್ತಿಯಾಗುವ ಹನಿಗಳ ಮೂಲಕ ಹರಡುತ್ತದೆ.

ಟಿಬಿ ಹರಡುವ ಬಗ್ಗೆ ತಪ್ಪುಕಲ್ಪನೆಗಳೂ ಇವೆ. ಟಿಬಿ ಯಾರೊಬ್ಬರ ಕೈಕುಲುಕುವುದರಿಂದ, ಆಹಾರ ಮತ್ತು ಪಾನೀಯಗಳನ್ನು ಹಂಚಿಕೊಳ್ಳುವುದರಿಂದ, ಬೆಡ್, ಹೊದಿಕೆ, ಟಾಯ್ಲೆಟ್ ಕಮೋಡ್ ಬಳಸುವುದರಿಂದ ಹರಡುವುದಿಲ್ಲ.

## ಪತ್ತೆ ಹೇಗೆ?

ಟಿಬಿ ರೋಗದ ಲಕ್ಷಣಗಳಿದ್ದರೆ ಕಫದ ಪರೀಕ್ಷೆಯನ್ನು ಹತ್ತಿರದ ಮೈಕ್ರೊಸ್ಕೋಪ್/ ನಾಟ್ (NAAT) ಕೇಂದ್ರಗಳಲ್ಲಿ ಟಿಬಿ ಪರೀಕ್ಷೆ ಪರೀಕ್ಷೆ ಮಾಡಿಸಿಕೊಳ್ಳಬೇಕು.

## ಚಿಕಿತ್ಸೆ ಏನು?

ಸಾಮಾನ್ಯವಾಗಿ ಕ್ಷಯರೋಗಕ್ಕೆ ಕನಿಷ್ಠ ಆರು ತಿಂಗಳು ಚಿಕಿತ್ಸೆ ನೀಡಬೇಕಾಗುತ್ತದೆ. ರೋಗಿಯ ತೂಕದ ಆಧಾರದ ಮೇರೆಗೆ ಮಾತ್ರೆಗಳನ್ನು ಕೊಡಬೇಕಾಗುತ್ತದೆ. ಎಲ್ಲ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಟಿಬಿಯ ಔಷಧಿ ಉಚಿತವಾಗಿ ಲಭ್ಯವಿದೆ. ಚಿಕಿತ್ಸೆಯ ವಿವರ ಈ ಕೆಳಗಿನಂತಿದೆ.

## ಟಿಬಿಯ ಕಳಂಕ ಮತ್ತು ತಾರತಮ್ಯ

ಎಚ್‌ಐವಿ ನಂತರ ಟಿಬಿ ಅತ್ಯಂತ ಕಳಂಕಿತ ಆರೋಗ್ಯ ಸಮಸ್ಯೆ ಮತ್ತು ಕಡೆಗಣಿಸುವ ಪಿಡುಗಾಗಿದೆ. ಆರೋಗ್ಯ ಸೇವೆಯಲ್ಲಿ ವಿಳಂಬ, ಜ್ಞಾನದ ಕೊರತೆ ಮತ್ತು ತಪ್ಪುಕಲ್ಪನೆ ಇವೆಲ್ಲವೂ ರೋಗವನ್ನು ಹರಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

### ಟಿಬಿ ರೋಗದ ಪ್ರಮುಖ ಲಕ್ಷಣಗಳು

- ಎರಡು ವಾರಕ್ಕೂ ಹೆಚ್ಚು ದಿನ ಕೆಮ್ಮು
- ಎರಡು ವಾರಕ್ಕೂ ಹೆಚ್ಚು ದಿನ ಜ್ವರ
- ತೂಕ ಕಡಿಮೆಯಾಗುವುದು
- ಅಶಕ್ತತೆ
- ಕಫದಲ್ಲಿ ರಕ್ತ
- ರಾತ್ರಿಯಲ್ಲಿ ಬೆವರು
- ಎದೆನೋವು
- ಹಸಿವಾಗದಿರುವುದು

ಇವುಗಳಲ್ಲಿ ಯಾವುದೇ ಒಂದು ಲಕ್ಷಣಗಳಿದ್ದರೆ ಟಿಬಿ ಪರೀಕ್ಷೆ ಕಡ್ಡಾಯ.

## ಕ್ಷಯ ನಿವಾರಣೆಗೆ ಒತ್ತು(ಕ್ಷಯ ಮುಕ್ತ ಕರ್ನಾಟಕ )

ಕರ್ನಾಟಕ ರಾಜ್ಯವು 2025ರೊಳಗೆ ಕ್ಷಯರೋಗ ಮುಕ್ತಗೊಳಿಸಲು ದಿಟ್ಟ ಕ್ರಮಗಳನ್ನು ತೆಗೆದುಕೊಂಡಿದ್ದು, ‘ಕ್ಷಯ ಮುಕ್ತ ಕರ್ನಾಟಕ’ ಯೋಜನೆಯಡಿಯಲ್ಲಿ ಸಮಗ್ರ ಮತ್ತು ವಾಸ್ತವಿಕ ಕಾರ್ಯತಂತ್ರದ ರೂಪುರೇಷೆಗಳನ್ನು ಜಾರಿಗೊಳಿಸಲು ಪ್ರಾರಂಭಿಸಲಾಗಿದೆ. ಇಡೀ ಕಾರ್ಯತಂತ್ರವು ರಾಷ್ಟ್ರೀಯ ಕಾರ್ಯತಂತ್ರದ ಯೋಜನೆಯಲ್ಲಿ ವಿವರಿಸಿರುವಂತೆ ತ್ವರಿತವಾಗಿ ರೋಗವನ್ನು ಪತ್ತೆ ಹಚ್ಚುವುದು, ಪರಿಣಾಮಕಾರಿಯಾಗಿ ಚಿಕಿತ್ಸೆ ನೀಡುವುದು, ತಡೆಗಟ್ಟುವುದು ಮತ್ತು ಬಲಿಷ್ಠವಾದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ರೂಪಿಸುವುದು. ಕ್ಷಯ ರೋಗ ನಿರ್ಮೂಲನೆಗಾಗಿ ರಾಜ್ಯ ಮತ್ತು ಕೇಂದ್ರ ಸರಕಾರ ಹತ್ತು ಹಲವು ಪ್ರಯತ್ನಗಳನ್ನು ಮಾಡುತ್ತಿದೆ. ಕ್ಷಯ ರೋಗವನ್ನು ಈಗ ಕೇಂದ್ರ ಸಮಗ್ರ ಪ್ರಾಥಮಿಕ ಆರೋಗ್ಯ ರಕ್ಷಣೆಯ ಅತ್ಯಗತ್ಯ ಭಾಗವನ್ನಾಗಿ ಮಾಡಿದೆ. ಪ್ರಕರಣಗಳನ್ನು ಮುಂಚಿತವಾಗಿ ಪತ್ತೆ ಹಚ್ಚುವುದು ಮತ್ತು ಸಮುದಾಯ ಮುಂತಾದ ವಿವಿಧ ಮಧ್ಯಸ್ಥಗಾರರ ಪಾಲ್ಗೊಳ್ಳುವಿಕೆ ಹೆಚ್ಚಿಸುವ ಮೂಲಕ ಕ್ಷಯ ಆರೈಕೆಯನ್ನು ವಿಸ್ತರಿಸುವುದು, ಆ ಮೂಲಕ ಕ್ಷಯ ರೋಗದ ಹೊಸ ಪ್ರಕರಣಗಳನ್ನು ತಡೆಯುವುದು ಈ ಯೋಜನೆಯ ಗುರಿ. ಈ ನಿಟ್ಟಿನಲ್ಲಿ ರಾಷ್ಟ್ರವ್ಯಾಪಿ ‘ಕ್ಷಯರೋಗ ಮುಕ್ತ ಭಾರತ’ ಅಭಿಯಾನವನ್ನು ಕೇಂದ್ರ ಸರ್ಕಾರ ಆರಂಭಿಸಿದೆ.

ರೋಗ ಪತ್ತೆ ಮತ್ತು ಚಿಕಿತ್ಸೆಯ ಅನುಸರಣೆಯನ್ನು ಸುಧಾರಿಸುವುದು, ಇತರ ಸಾಮಾಜಿಕ